ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರಃ4/2021

ಚಾಸಾಃ3 ಪ್ರಾಸಾಃ3

ದಿನಾಂಕಃ 16.08.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಜಾಕೀರ್ ಹುಸೇನ್ |
| ತಂದೆಯ ಹೆಸರು | : | ಹಸೈನಾರ್ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ನಾವುಂದ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ಆರೋಪಿತರನ್ನು ನೋಡಿ ಪರಿಚಯವಿರುತ್ತದೆ. ಸಾಕ್ಷಿಗೆ ಸಾಕ್ಷಿ ನಿಪಿ-1 ರಿಂದ 4ನ್ನು ತೋರಿಸಲಾಗಿದ್ದು, ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-1(ಬಿ) ರಿಂದ ನಿಪಿ-4(ಬಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಗಳನ್ನು ಠಾಣೆಯಲ್ಲಿ ಮಾಡಿರುತ್ತೇನೆ. ಸದ್ರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಸ್ವತ್ತನ್ನು ವಶಪಡಿಸಿಕೊಂಡಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಸಾಕ್ಷಿ ನಿಪಿ-5 ಮತ್ತು 6ನ್ನು ನೋಡಿ ಗುರುತಿಸಿಲ್ಲ. ಸಾಕ್ಷಿ ಕಾರಿನ ಪೋಟೋಗಳನ್ನು ನೋಡಿ ಗುರುತಿಸಿಲ್ಲ. ಸಾಕ್ಷಿ ಮುಮಾ1ನ್ನು ನೋಡಿ ಗುರುತಿಸಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ವಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ದಿಃ 22-05-2020 ರಂದು ಪೊಲೀಸರು ಪಂಚನಾಮೆ ಜರುಗಿಸಲು ಸ್ಥಳಕ್ಕೆ ಭೇಟಿ ನೀಡಿದ್ದು, ಚಾಸಾ-1ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ-4 ರವರ ಸಮಕ್ಷಮ ಬೆಳಿಗ್ಗೆ 11 ರಿಂದ 11-30ರವರೆಗೆ ಪಂಚನಾಮೆ ಮತ್ತು ನಕ್ಷೆ ತಯಾರಿಸಿ ಅದೇ ದಿನ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಕಾರು ಬಿದ್ದಿದ್ದ ಬಗ್ಗೆ ಮಧ್ಯಾಹ್ನ 1-45 ರಿಂದ 2-15ರವರೆಗೆ ಹಾಗೂ ಸದ್ರಿ ಕಾರನ್ನು ವಶಕ್ಕೆ ಪಡೆಯುವ ವೇಳೆ ಬೆಳಗ್ಗೆ 9-05 ರಿಂದ 10 ಗಂಟೆಯವರೆಗೆ ನಿಪಿ-1 ರಿಂದ 4ನ್ನು ಜರುಗಿಸಿ ಕೆಎ-20-

ಎಂಎ-3933 ವಾಹನವನ್ನು ವಶಕ್ಕೆ ಪಡೆದು ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ವೇಳೆಗೆ 3 ಸ್ಥಳಗಳಲ್ಲಿ ಪೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ನಾನು ಈ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು.

ಮೇಲೆ ಹೇಳಿದ ಕ್ರಮವನ್ನು ನನ್ನ ಸಮಕ್ಷಮ ಜರುಗಿಸಿದ್ದರೂ ಆರೋಪಿತರು ನನ್ನ ಪರಿಚಯಸ್ಥರಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿತರ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**